ಅದರ ವಿವರ ತರಿಸಿ ನೋಡುತ್ತೇನೆಂದು ಹೇಳಿದ್ದರು. ಅವೈಜ್ಞಾನಿಕವಾದ ಕರಮೌಲ್ಯದಿಂದ ಮೈಸೂರು ಜನತೆ ಕಂಗಾಲಾಗಿದ್ದಾರೆ. ದಯವಿಟ್ಟು ಕಂಗಾಲಾಗಿರತಕ್ಕಂಥ ಜನರ ಕಣ್ಣೀರನ್ನು ಒರೆಸತಕ್ಕಂಥ ದಿಕ್ಕಿನಲ್ಲಿ ಆ ಜನತೆ ಪ್ರಾಮಾಣಿಕವಾಗಿ ಎಷ್ಟು ಕಟ್ಟಬೇಕೋ ಅಷ್ಟು ಕಟ್ಟುವ ರೀತಿಯಲ್ಲಿ ತಾವು ಪರಾಮರ್ಶಿಸಬೇಕೆಂದು ಕೇಳಿಕೊಳ್ಳುತ್ತೇನೆ. ದಯಮಾಡಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸೂಕ್ತವಾದ ಉತ್ತರವನ್ನು ಅಪೇಕ್ಷಿಸುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಅಧ್ಯಯನ ಮಾಡಿ ಆನಂತರ ವೈಜ್ಞಾನಿಕವಾಗಿ ನಿರ್ಧಾರವನ್ನು ತೆಗೆದುಕೊಳ್ಳಿ ಎಂದು ನಾನು ಸಂಬಂಧಪಟ್ಟ ಮಾನ್ಯ ಸಚಿವರಿಗೆ ಹೇಳಿದ್ದೇನೆ. ಅವರು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆ ಉಲ್ಬಣಗೊಂಡಿರುವ ಬಗ್ಗೆ.

+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆ ಉಲ್ಬಣವಾಗುತ್ತಿರುವ ಬಗ್ಗೆ ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುವುದಕ್ಕೆ ಮತ್ತು ಅಲ್ಲಿ ತಕ್ಷಣದಲ್ಲಿ ಈ ರೋಗದ ಬಗ್ಗೆ ಪರಿಹಾರ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಶ್ರೀ ಮಾಬಲಾ ಬೀರಾಗೌಡ ಮತ್ತು ಶ್ರೀ ಗಣಪತಿ ಮಾಬಲಾ ಗೌಡ ಎನ್ನುವಂಥ ಇಬ್ಬರು ವ್ಯಕ್ತಿಗಳಿಗೆ ಮಂಗನ ಕಾಯಿಲೆಯ ರೋಗ ತಗುಲಿ ಅವರನ್ನು ಸಿದ್ದಾಪುರ ತಾಲ್ಲೂಕಿನಿಂದ 5 ಕಿ.ಮಿ. ದೂರದಲ್ಲಿರುವಂಥ ಬೀಳಗಿ ಗ್ರಾಮದಲ್ಲಿಯ ಆಸ್ಪತ್ರೆಗೆ ದಾಖಲಾಗಿ ನೆನ್ನೆತಾನೇ ಅವರು ಅಲ್ಲಿ ಅಸುನೀಗಿದ್ದಾರೆ. ಈ ರೀತಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆ ಹಬ್ಬುತ್ತಿದೆ ಎಂದು ಕಳೆದ ಒಂದು ತಿಂಗಳಿನಿಂದ ಪತ್ರಿಕೆಗಳು ವರದಿ ಮಾಡುತ್ತಿವೆ, ಜನಪ್ರತಿನಿಧಿಗಳು ಸರ್ಕಾರಕ್ಕೆ ಹೇಳುತ್ತಿದ್ದರೂ ಸಹ ಸರ್ಕಾರ ಗಂಭೀರವಾಗಿ ಈ ವಿಷಯವನ್ನು ಪರಿಗಣಿಸದಿರುವುದರಿಂದ ನಿನ್ನೆ ಇಬ್ಬರು ಮೃತರಾಗಿದ್ದಾರೆ. ಅಷ್ಟೇ ಅಲ್ಲದೆ ಕುಂದಾಪುರದಲ್ಲಿ ಇನ್ನೂ 17 ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಮತ್ತು ನೂರಾರು ಜನಕ್ಕೆ ಈ ರೋಗ ತಗುಲಿದೆ ಎನ್ನುವ ಭೀತಿ ಇದೆ, ಆ ಲಕ್ಷಣಗಳು ಕಾಣುತ್ತಿವೆ. ಹಾಗೆಯೇ ಹೊನ್ನಾವರ, ಜೋಯಿಡಾ ತಾಲ್ಲೂಕುಗಳಲ್ಲಿ ಸಹ ವಿಶೇಷವಾಗಿ ಈ ರೋಗ ಒಂದು ತಿಂಗಳಿನಿಂದ ಕಂಡುಬರುತ್ತಿದೆ. ಆದರೂ ಸಹ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಉದಾಸೀನ ತೋರಿಸುತ್ತಿದೆ ಎಂದು ನಾವು ಹೇಳಬೇಕಾಗುತ್ತದೆ. ಏಕೆಂದರೆ ಹೊನ್ನಾವರದಲ್ಲಿ ಮಂಗನ ಕಾಯಿಲೆಯ ನಿವಾರಣೆಗೋಸ್ಕರವೇ ಔಷಧಿಯನ್ನು ಕೊಡತಕ್ಕಂಥ ಆಸ್ಪತ್ರೆ ಇದೆ. ಆದರೆ ಈ ಉಪಕೇಂದ್ರದಲ್ಲಿ ವೈದ್ಯರು ಇಲ್ಲಿ ಕೇವಲ ಇಬ್ಬರು ಕಾರ್ಯಕರ್ತರು ಮಾತ್ರ ಇದ್ದಾರೆ. ಹಾಗಾಗಿ ಅಲ್ಲಿ ಯಾವುದೇ ರೀತಿಯಾದಂಥ ವೈದ್ಯಕೀಯ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಉತ್ತರ ಕನ್ನಡ ಜಿಲ್ಲೆ ಭೌಗೋಳಿಕವಾಗಿ ಬಹಳ ದೊಡ್ಡದು ಆಗಿರುತ್ತದೆ. ಅಲ್ಲಿ ಈ ರೀತಿ ಮಂಗಗಳು ಸಾಯುತ್ತಿರುತ್ತವೆ. ಮಂಗಗಳು ಸತ್ತಿರುವುದರಿಂದಾಗಿ ಆ ರೋಗ ಮನುಷ್ಯರಿಗೂ ಹಬ್ಬುತ್ತಿದೆ. ಇದು ಏನೂ ಹೊಸದಲ್ಲ. ಕಳೆದ ವರ್ಷ ಮತ್ತು ಹಿಂದಿನ ವರ್ಷ ಮಂಗನ ಕಾಯಿಲೆಯಿಂದ ಅನೇಕ ಜನರು ಸತ್ತಿರುವ ದಾಖಲೆಗಳು ಸರ್ಕಾರದಲ್ಲಿದೆ. ಆದರೆ ಈ ರೋಗಕ್ಕೆ ಬೇಕಾದ ಲಸಿಕೆ ಶಿವಮೊಗ್ಗದ ಘಟಕದಲ್ಲಿ ತಯಾರಾಗುತ್ತಿದ್ದು ಅಲ್ಲಿಂದ ಸರಿಯಾದ ಸಮಯದಲ್ಲಿ ಲಸಿಕೆ ಪೂರೈಕೆಯಾಗುತ್ತಿಲ್ಲ.

ಬಹುಶಃ ಲಸಿಕೆ ಅಲ್ಲಿಂದ ನಿನ್ನೆ ಅಥವಾ ಮೊನ್ನೆಯ ದಿವಸ ಬಂದಿರಬೇಕು. ಆದರೆ ಈ ರೋಗ ಕಳೆದ ಒಂದು ತಿಂಗಳಿನಿಂದ ಹಬ್ಬಿ ಜೋಯಿಡಾ ತಾಲ್ಲೂಕಿನಲ್ಲಿ ನೂರಾರು ಮಂಗಗಳು ಸತ್ತಿರುವುದನ್ನು ಮತ್ತು ಈ ರೋಗ ಹಬ್ಬುತ್ತಿರುವುದನ್ನು ಹೇಳಿದೆವು. ಡಾಕ್ಟರಿಗೆ ಆ ರೋಗದ ಲಕ್ಷಣ ಗೊತ್ತೇ ಇದೆ. ನಮ್ಮ ಊರು ಕಡೆ 'ಉಳುಗು' ಎಂದು ಕರೆಯುತ್ತಾರೆ, ಅದು ಮಂಗನ ಮೈಮೇಲೆ ಹತ್ತಿಕೊಂಡು ರಕ್ತವನ್ನು ಹೀರಿ ಸಾಯಿಸುತ್ತದೆ. ಕಾಯಿಲೆ ತಗುಲಿಸಿಕೊಂಡ ನೂರಾರು ಮಂಗಗಳು ಹೊಳೆಯ ಬದಿಗೆ ನೀರು ಕುಡಿಯುವುದಕ್ಕೆ ಬಂದು ಸಾಯುತ್ತವೆ ಕೆಲವು-ಮಂಗಗಳು ಕಾಡಿನ ಮಧ್ಯೆ ಸಹ ಸಾಯುತ್ತವೆ. ಕಾಡಿನ ಮಧ್ಯೆ ಜೀವನ ಸಡೆಸುವಂಥ ಕೂಲಿ ಕಾರ್ಮಿಕರು ಬಡವರು ಯಾರು ಇದ್ದಾರೆ ಅವರಿಗೂ ಸಹ ಈ ರೋಗ ತಗುಲುತ್ತದೆ. ಅವರಿಗೆ ರೋಗ ತಗುಲಿದ ನಂತರ ಜ್ವರ ವಾಂತಿಭೇದಿ ಇತ್ಯಾದಿ ಪ್ರಾರಂಭವಾಗುತ್ತದೆ. ಈ ರೀತಿ ಲಕ್ಷಣಗಳು ಕಂಡುಬಂದಾಗ ಸಂಬಂಧಪಟ್ಟವರ ರಕ್ತವನ್ನು ಪರೀಕ್ಷೆಗೆ ಒಳಪಡಿಸುವಂಥ ಒಂದು ಪದ್ಧತಿ ಇದೆ. ಆದರೆ ರಕ್ತವನ್ನು ಪರೀಕ್ಷೆಗೆ ತೆಗೆದುಕೊಂಡು ಹೋದರೆ ಎರಡು ವಾರ, ನಾಲ್ಕು ವಾರ ಕಳೆದರೂ ಸಹ ಆ ರಕ್ತ ಪರೀಕ್ಷೆ ಮಾಡಿ ಅದಕ್ಕೆ ಉತ್ತರ ಕೊಡುವುದಿಲ್ಲ. ಇದು ಮಾನ್ಯ ಸಚಿವರಿಗೆ ಕೂಡ ಗೊತ್ತಿದೆ, ಏಕೆಂದರೆ ಇದು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲ್ಲ, ಕೇವಲ ಶಿವಮೊಗ್ಗದಲ್ಲಿ ಮಾತ್ರ ಈ ವ್ಯವಸ್ಥೆ ಇದೆ. ಆದ್ದರಿಂದ ಶಿವಮೊಗ್ಗಕ್ಕೆ ರಕ್ತವನ್ನು ಕಳುಹಿಸಿದ ನಂತರ ಸಂಬಂಧಪಟ್ಟವರು ರಕ್ತ ಪರೀಕ್ಷೆ ಮಾಡಿ ತಕ್ಷಣವೇ ಉತ್ತರ ಕಳುಹಿಸದೇ ಇರುವುದರಿಂದಾಗಿ ಡಾಕ್ಟರುಗಳು ಔಷಧಿಯನ್ನು ಕೊಡುವುದಿಲ್ಲ. ಈ ಎಲ್ಲಾ ಗೊಂದಲಗಳಿಂದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿವರ್ಷವನ್ನು ಗಂಭೀರವಾಗಿ ಪರಿಗಣಿಸಬೇಕು. ಹೊನ್ನಾವರದ ಆಸ್ಪತ್ರೆ ಯೂನಿಟ್‌ಗೆ ತಕ್ಷಣವೇ ವೈದ್ಯರನ್ನು ನೇಮಕ ಮಾಡಬೇಕು. ಅಲ್ಲಿ ವಾಹನ ಸೌಲಭ್ಯ ಇಲ್ಲದಿರುವುದರಿಂದ ವಾಹನ ಸೌಲಭ್ಯವನ್ನು ಕೊಡಬೇಕು. ಶಿವಮೊಗ್ಗ ಘಟಕದಿಂದ ಲಸಿಕೆಯನ್ನು ಸಮಯಕ್ಕೆ ಸರಿಯಾಗಿ ಪೂರೈಸಬೇಕು. ರಕ್ತ ಪರೀಕ್ಷೆಗಾಗಿ ಕಳುಹಿಸಿದ ರಕ್ತವನ್ನು ಬೇಗ ಪರೀಕ್ಷೆ ಮಾಡಿ ಅದರ ಪಲಿತಾಂಶವನ್ನು ಬೇಗನೆ ಕಳುಹಿಸಬೇಕು.

12.40 ಪಿ.ಎಂ

ಅಷ್ಟೇ ಅಲ್ಲದೆ, ಜನರಲ್ ಆಸ್ಪತ್ರೆ ಏನಿದೆ, ಅಂದರೆ, ಮಂಗನ ಕಾಯಿಲೆಗೆ ಔಷಧಿ ನೀಡುವಂಥ ಆಸ್ಪತ್ರೆ ಮಾತ್ರವಲ್ಲದೆ ಉಳಿದ ಆಸ್ಪತ್ರೆಗಳು ಯಾವುದಿದೆಯೋ, ಉದಾಹರಣೆಗೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಲ್ಲಾಪುರದಲ್ಲಿ ಈ ರೋಗದ ಲಕ್ಷಣ ಕಂಡುಬಂದಿದ್ದು, ಅಲ್ಲದೆ ಇಡೀ ಜಿಲ್ಲೆಯಾದ್ಯಂತ ರೋಗದ ಲಕ್ಷಣ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಉಳಿದ ಎಲ್ಲಾ ಆಸ್ಪತ್ರೆಗಳಿಗೆ ತಕ್ಷಣದಲ್ಲಿ ಔಷಧಿ ಕೊಡುವಂಥ ವ್ಯವಸ್ಥೆ ಮಾಡದೆ ಹೋದರೆ ಈ ರೋಗ ಗಂಭೀರವಾಗಿ ಇಡೀ ಜಿಲ್ಲೆಯಾದ್ಯಂತ ಹಬ್ಬುತ್ತದಾದ್ದರಿಂದ ಸರ್ಕಾರ ಇದನ್ನು ಗಂಭೀರವಾಗಿ ಗಮನಿಸಬೇಕೆಂದು ನಾನು ಪ್ರಸ್ತಾಪಿಸುತ್ತಿದ್ದೇನೆ.

+ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಗನ ಕಾಯಿಲೆ ಅಥವಾ ಕ್ಯಾಸನೂರು ಫಾರೆಸ್ಟ್ ಡಿಸೀಸ್ ಎಂದು ನಾವು ಏನು ಕರೆಯುತ್ತೇವೆ, ಈ ರೋಗ ಮೊದಲು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಕಂಡು ಬಂತು. ತಮಗೆ ಈ ಕುರಿತು ವಿವರಗಳನ್ನು ಕೊಡಬೇಕಾದರೆ, ಇದುವರೆವಿಗೂ 24 ಜನರಿಗೆ ಈ ರೋಗ ಸೋಂಕಿದೆ. ಜೋಯಿಡಾ ಬಗ್ಗೆ ನಮ್ಮ ಸದಸ್ಯ ಮಿತ್ರರು ಏನು ಹೇಳುತ್ತಿದ್ದರು, ಜೋಯಿಡಾದಲ್ಲಿ ಐದು ಜನರು

ಈ ಕಾಯಿಲೆಗೆ ತುತ್ತಾಗಿದ್ದಾರೆ. ಒಟ್ಟು 12 ಹಳ್ಳಿಗಳು ಈ ರೋಗದ ಪ್ರಭಾವಕ್ಕೊಳಗಾಗಿವೆ. ಸಾಗರದಲ್ಲಿ ಒಂದು, ಕೊಪ್ಪಳದಲ್ಲಿ ಮೂರು, ಹೊನ್ನಾವರದಲ್ಲಿ ಒಂದು, ಜೋಯಿಡದಲ್ಲಿ ಐದು ಮತ್ತು ಸಿದ್ದಾಪುರದಲ್ಲಿ ಎರಡು ಪ್ರಕರಣಗಳು ವರದಿಯಾಗಿವೆ. ಈ ರೋಗ ಪರೀಕ್ಷೆ ಬಗ್ಗೆ ತಮಗೆ ಗೊತ್ತಿರುವಂತೆ ಬೇಕಾಗುತ್ತದೆ. ಏಕೆಂದರೆ, ಪೆನೆಟ್ರೇಶನ್ ಟೆಸ್ಟ್ ಮಾಡಬೇಕಾಗುತ್ತದೆ. ಈ ತಾಪಸಣೆಯನ್ನು ಎಲ್ಲಾ ಕಡೆಯೂ ಮಾಡುವ ಹಾಗಿಲ್ಲ. ಎಲ್ಲಿ ಇದರ ವ್ಯವಸ್ಥೆ ಇರುತ್ತದೋ ಅಲ್ಲಿ ಮಾತ್ರ ಮಾಡಬೇಕಾಗುತ್ತದೆ. ಈ ವ್ಯವಸ್ಥೆ ಶಿವಮೊಗ್ಗದಲ್ಲಿದೆ. ಏಕೆಂದರೆ, ಮೊದಲು ಈ ಕಾಯಿಲೆ ಸಾಮಾನ್ಯವಾಗಿ ಶಿವಮೊಗ್ಗದಲ್ಲಿ ಕಾಣಿಸಿಕೊಳ್ಳುತ್ತಿದ್ದುದರಿಂದ ಅಲ್ಲಿ ಈ ವ್ಯವಸ್ಥೆ ಮಾಡಲಾಗಿರುತ್ತದೆ. ಈ ಕಾಯಿಲೆಗೆ ನಿರ್ದಿಷ್ಟ ಚಿಕಿತ್ಸೆ ಇರುವುದಿಲ್ಲ. ಕಾಯಿಲೆ ಬಂದರೆ ಜ್ವರ ಬರುತ್ತದೆ. ಇದನ್ನು ಕಡಿಮೆ ಮಾಡಬೇಕಾಗುತ್ತದೆ ಅಥವಾ ಇನ್‌ಫೆಕ್ಷನ್ ಏನಾದರೂ ಇದ್ದರೆ ಆ್ಯಂಟಿ ಬಯಾಟಿಕ್ ಡ್ರಗ್ ಕೊಡಬೇಕಾಗುತ್ತದೆ. ಆದರೆ, ಮಂಗನ ಕಾಯಿಲೆಗೆ ನಿರ್ದಿಷ್ಟವಾಗಿ ಇರುವರೆಗೂ ಯಾವುದೇ ಚಿಕಿತ್ಸೆಯನ್ನೂ ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ. ಕಾಯಿಲೆ ಬಂದಾಗ ವ್ಯಾಕ್ಸಿನ್ ಕೊಡುವ ಮೂಲಕ ನಿಯಂತ್ರಿಸಬಹುದು. ತಾವು ಹೇಳಿದಂತೆ ಅಲ್ಲಿ ಗಂಭೀರವಾದ ಪರಿಸ್ಥಿತಿಯೇನೂ ಉದ್ಭವವಾಗಿಲ್ಲ. ಈಗಾಗಲೇ ಎರಡು ಸಾವಿರ ಜನರಿಗೆ ವ್ಯಾಕ್ಸಿನ್ ಕೊಟ್ಟಿದ್ದೇವೆ ಮತ್ತು ಈ ವ್ಯಾಕ್ಸಿನ್ ಅನ್ನು ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ. ಯಾವ್ಯಾವ ಹಳ್ಳಿಗಳಲ್ಲಿ ಮಂಗಗಳು ಸಾವಿಗೆ ತುತ್ತಾಗುತ್ತವೋ ಅಂತಹ ಹಳ್ಳಿಗಳಲ್ಲಿ ಮಾತ್ರ ವ್ಯಾಕ್ಸಿನ್ ಅನ್ನು ಕೊಡಬೇಕಾಗುತ್ತದೆ. ಏಕೆಂದರೆ, ಇದು ಕಾಸ್ಟ್‌ಲಿ ಪ್ರಿಪರೇಶನ್ ಆಗಿದೆ ಮತ್ತು ರಿಸ್ಕ್ ಸಹ ಇರುತ್ತದೆ. ಆದಕಾರಣ, ಈಗಾಗಲೇ ಎರಡು ಸಾವಿರ ಇನಾಕ್ಯುಲೇಶನ್ ಕೊಡಲಾಗಿದ್ದು ಮತ್ತು ಬೇರೆ ಹಳ್ಳಿಗಳಲ್ಲೂ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅಲ್ಲಿ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿದೆ. ಎಲ್ಲಕ್ಕಿಂತಲೂ ಮೊದಲು ಈ ಕಾಯಿಲೆ ಸಾಗರದಲ್ಲಿ ಕಂಡು ಬರುತ್ತಿತ್ತು. ಈ ಕಾಯಿಲೆ ಎಲ್ಲಾ ಕಡೆಗಳಿಗೂ ಹಬ್ಬದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಸರ್ವೇಲನ್ಸ್ ಕಾರ್ಯಕ್ರಮ ಬಹಳ ಭರದಿಂದ ಸಾಗಿದೆ. ಶಿವಮೊಗ್ಗದಲ್ಲಿರುವ ಅಧಿಕಾರಿಗಳೆಲ್ಲರೂ ಅಲ್ಲಿಯೇ ಕ್ಯಾಂಪ್ ಹೂಡಲು ಈಗಾಗಲೇ ನಿರ್ದೇಶನ ಕೊಡಲಾಗಿದೆ. ಏಕೆಂದರೆ, ಈ ವಿಷಯ ಮೊನ್ನೆ ಉದ್ಭವವಾಗಿರುವುದರಿಂದ ಅವರೊಂದಿಗೆ ಮಾತನಾಡಿದ್ದೇನೆ. ಆದುದರಿಂದ, ಅಧಿಕಾರಿಗಳೆಲ್ಲರೂ ಸ್ಥಳದಲ್ಲಿಯೇ ಇರುವುದರಿಂದ ಯಾವುದೇ ತರಹದ ಭಯದ ವಾತಾವರಣ ನಿರ್ಮಾಣಕ್ಕೆ ಕಾರಣವಿಲ್ಲವೆಂದು ನಾನು ಸನ್ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹೊನ್ನಾವರದಲ್ಲಿನ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕಳೆದೆರಡು ವರ್ಷಗಳಿಂದಲೂ ವೈದ್ಯರುಗಳು ಇಲ್ಲದಿರುವುದರಿಂದ, ಅವರ ಕೊರತೆ ಕಂಡುಬಂದಿರುವುದರಿಂದ ಅವರ ನೇಮಕ್ಕೆ ತುರ್ತು ಕ್ರಮ ಕೈಗೊಳ್ಳಬೇಕು; ಅಲ್ಲದೇ ಅಲ್ಲಿ ವಾಹನದ ಸೂಕ್ತ ವ್ಯವಸ್ಥೆಯೂ ಇಲ್ಲದಿರುವುದರಿಂದ ಇದಕ್ಕೂ ಕೂಡ ಕ್ರಮ ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ ಮತ್ತು ಮಾನ್ಯ ಸಚಿವರಿಂದ ಉತ್ತರ ಬಯಸುತ್ತಿದ್ದೇನೆ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ ಈಗಾಗಲೇ ಅಲ್ಲಿ ವಾಹನದ ವ್ಯವಸ್ಥೆ ಇದೆ. ಆದರೆ, ತಾವು ಹೇಳಿದಂತೆ ವೈದ್ಯರ ಕೊರತೆಯಿರುವುದು ನಿಜ. ಅಲ್ಲಿಗೆ ವೈದ್ಯರನ್ನು ನೇಮಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.